**ಕಾರ್ಯದರ್ಶಿ-ಖಜಾಂಚಿಗಳ ಕಛೇರಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕಾವೇರಿ ಭವನದ ಎದುರು, ಕೆ.ಜಿ. ರಸ್ತೆ, ಬೆಂಗಳೂರು-02.**

ಸಂಖ್ಯೆ:- ಲೆಶಾ4/ಅ.ರ.ಶಿ.ಅ.ಸ/16/02/2020-21 ದಿನಾಂಕ: 01/04/2021

ದಿನಾಂಕ: 06/07/21

## ಸುತ್ತೋಲೆ

ವಿಷಯ:- ಅನುದಾನ ರಹಿತ ಶಾಲಾ / ಕಾಲೇಜುಗಳ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಕಛೇರಿಯಿಂದ ನೊಂದಣಿ ಸಂಕೇತ ಪಡೆಯುವ ಕುರಿತು.

ಉಲ್ಲೇಖ:- ಸನ್ಮಾನ್ಯ ಸಚಿವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು ಕರ್ನಾಟಕ ಸರ್ಕಾರ ಇವರು ಅನುಮೋದಿಸಿರುವಂತೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಅನ್ವಯ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಕಛೇರಿಯಿಂದ ರಾಜ್ಯದ ಖಾಸಗಿ ಅನುದಾನರಹಿತ ಶಾಲಾ/ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು/ಉಪನ್ಯಾಸಕರುಗಳಿಗೆ ಆಜೀವ ಸದಸ್ಯತ್ವ ನೀಡಿ, ಸರ್ಕಾರಿ/ ಖಾಸಗಿ ಅನುದಾನಿತ ಶಾಲಾ ಕಾಲೇಜುಗಳಲ್ಲಿನ ಶಿಕ್ಷಕರು/ ಉಪನ್ಯಾಸಕರುಗಳಿಗೆ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ನೀಡುತ್ತಿರುವ ಸೌಲಭ್ಯವನ್ನು ವಿಸ್ತರಿಸಲು ತೀರ್ಮಾನಿಸಲಾಗಿದೆ. ಯಾವುದೇ ಶಾಲಾ/ಕಾಲೇಜುಗಳಲ್ಲಿನ ಶಿಕ್ಷಕರು/ ಉಪನ್ಯಾಸಕರು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ಸೌಲಭ್ಯವನ್ನು ಪಡೆಯಲು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಕಛೇರಿಯಲ್ಲಿ ನೊಂದಾಯಿಸಿ ಶಾಲಾ ಸಂಕೇತ ಪಡೆಯುವುದು ಕಡ್ಡಾಯವಾಗಿದೆ.. ಶಾಲಾ ಸಂಕೇತ ಪಡೆದ ನಂತರ ಶಾಲೆಯಿಂದ ಸಂಗ್ರಹವಾದ ವಂತಿಗೆ ಹಾಗೂ ಸಂಗ್ರಹವಾದ SWF/TBF ಶುಲ್ಕವನ್ನು ಶಾಲಾ ಸಂಕೇತ ನಮೂದಿಸಿ, ಚಲನ್ ಮುಖಾಂತರ ಸಂಗ್ರಹವಾದ ವಂತಿಗೆ ಹಾಗೂ ಶುಲ್ಕವನ್ನು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಕಛೇರಿಗೆ ಪಾವತಿಸುವುದು ಕಡ್ಡಾಯವಾಗಿದೆ.

ಖಾಸಗಿ ಅನುದಾನರಹಿತ ಶಾಲಾ/ಕಾಲೇಜುಗಳ ಮುಖ್ಯಸ್ಥರು ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿ ನೊಂದಣಿ ಮಾಡಿಕೊಳ್ಳಲು ಸೂಚಿಸಿದೆ.

1. ಸರ್ಕಾರದಿಂದ ಶಾಲೆ/ಕಾಲೇಜು ಪ್ರಾರಂಭಿಸಲು ಪಡೆದ ಅನುಮತಿ ಪತ್ರದ ಪ್ರತಿಯನ್ನು ನಿಯಂತ್ರಣಾಧಿಕಾರಿಗಳಿಂದ ದೃಢಿಕರಿಸಿ ಸಲ್ಲಿಸುವುದು. ಸತತವಾಗಿ ಮಾನ್ಯತೆ ನವೀಕರಣವಾಗಿರುವ ಬಗ್ಗೆ ಅಗತ್ಯ ದಾಖಲೆ ಪತ್ರಗಳನ್ನು ಒದಗಿಸುವುದು.
2. ಶಾಲಾ ನೊಂದಣಿಗಾಗಿ ಅರ್ಜಿ ಸಲ್ಲಿಸುವ ಶಾಲೆ/ಕಾಲೇಜುಗಳು ರಾಜ್ಯ ಸರ್ಕಾರ ನಿಗಧಿಪಡಿಸಿದ ಪಠ್ಯಕ್ರಮವನ್ನು ಅಳವಡಿಸಿಕೊಂಡಿರಬೇಕು.
3. ನಿಗಧಿತ ಶಾಲಾ ನೊಂದಣಿ ಅರ್ಜಿ ನಮೂನೆಯು www.schooleducation.kar.nic.in ನಿಂದ ಪಡೆಯಬಹುದು. (ಶಿಕ್ಷಕರ ಕಲ್ಯಾಣ ನಿಧಿ colom/SWF/TBF colom)
4. ಶಾಲೆ/ಕಾಲೇಜು ಪ್ರಾರಂಭವಾದ ವರ್ಷದಿಂದ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಶಿಕ್ಷಕರ ಸಂಖ್ಯೆಗಳ ಮಾಹಿತಿ ಪಟ್ಟಿಯನ್ನು ನಿಯಂತ್ರಣಾಧಿಕಾರಿಗಳ ದೃಢೀಕರಣದೊಂದಿಗೆ ಸಲ್ಲಿಸುವುದು.
5. ಪ್ರಸ್ತಾವನೆಯೊಂದಿಗೆ ಲಗತ್ತಿಸಿರುವ ಯಾವುದೇ ಜೆರಾಕ್ಸ್ ಪ್ರತಿಗಳನ್ನು ನಿಯಂತ್ರಣಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು.

ಆಯುಕ್ತರು ಹಾಗೂ ಕಾರ್ಯದರ್ಶಿ/ಖಜಾಂಚಿಗಳು